ಕಾರಣಗಳೇನು ? ಪ್ರಯಾಣಿಕರ ಹಿತದೃಷ್ಟಿಯಿಂದ ಇದನ್ನು ಯಾವಾಗ ಪೂರ್ತಿಗೊಳಿಸುತ್ತೀರಿ ? ಈ ಕಾರ್ಯ 1984 ರಲ್ಲೇ ಪ್ರಾರಂಭವಾಯಿತು. 6 ವರ್ಷದಿಂದ ಶೌಚಾಲಯವನ್ನು ಕಟ್ಟುವುದರಲ್ಲೇ ಇದ್ದಾರೆ. ಈ ಕಾರ್ಯ ಪೂರ್ಣವಾಗದೆ ಮುಳುಬಾಗಿಲು ಬಸ್ ನಿಲ್ದಾಣದಲ್ಲಿ 3–4 ಸಾವಿರ ಜನರಿಗೆ ಅನಾನುಕೂಲವಾಗುತ್ತಿದೆ. ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ?

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿ ಒದಗಿಸುತ್ತೇನೆ.

5) ಅಲ್ಪ ಸಂಖ್ಯಾತರ ವಿದ್ಯಾ ಸಂಸ್ಥೆಗಳಲ್ಲಿ ನೇಮಕಾತಿಗಾಗಿ ಆರ್ಥಿಕ ನೆರವು ನೀಡಲು ವಿಳಂಬ ಮಾಡುತ್ತಿರುವುದು.

Sri T. B. Jayachandra :– Though there is constitutional protection for minority institutions to make appointments as and when vacancies arise, there are 80 posts of Lecturers vacant in 12 colleges run by minorities in the State. The Director of Collegiate Education has agreed to meet the financial implications and the Commissioner and Secretary of Education Department has recommended to Finance Department for clearance. The file is still pending with the Finance Depatrment for the last three months without any positive action. Will the Hon'ble Chief Minister be pleased to get the file and clear it within three days without clubbing the issue with other files ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) :– ಸನ್ಮಾನ್ಯ ಸಭಾಧ್ಯಕ್ಷರೆ, ಈ ಅಲ್ಪಸಂಖ್ಯಾತ ಸಂಸ್ಥೆಗಳು ಏನಿವೆ ಇವುಗಳಲ್ಲಿ ಸುಮಾರು 80 ಉಪನ್ಯಾಸಕರ ಹುದ್ದೆ ಸುಮಾರು ಹನ್ನೆರಡು ಕಾಲೇಜುಗಳಲ್ಲಿ ಬಾಕಿ ಇದೆ. ಈ ವಿಚಾರವನ್ನು ನಾವು ಈಗಾಗಲೇ ಆರ್ಥಿಕ ಇಲಾಖೆಗೆ ತಿಳಿಸಿದ್ದೇವೆ. ಆರ್ಥಿಕ ಇಲಾಖೆ ಕಾರ್ಯದರ್ಶಿಯವರ ಜೊತೆಯಲ್ಲಿ ಈಗಾಗಲೇ ಸಮಾಲೋಚನೆ ಮಾಡಿದ್ದೇವೆ. ಆದಷ್ಟು ಜಾಗ್ರತೆ ಇದಕ್ಕೆ ಮಂಜೂರಾತಿ ದೊರಕಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

6) ನಗರ ಪ್ರದೇಶದ ಹೋಟೆಲ್‌ಗಳಲ್ಲಿ ತಿಂಡಿಗಳ ದರ ಪೆಚ್ಚಿಸುತ್ತಿರುವುದು.

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ) :– ಅಧ್ಯಕ್ಷರೆ, ಪ್ರತಿಯೊಂದು ನಗರ ಪಟ್ಟಣಗಳಲ್ಲಿರುವ ಹೋಟೆಲ್‌ಗಳಲ್ಲಿ ತಿಂಡಿ, ಪಾನೀಯ, ಊಟ ಹೀಗೆ ಪ್ರತಿಯೊಂದಕ್ಕೂ ದಿನದಿಂದ ದಿನಕ್ಕೆ ಬೆಲೆಯನ್ನು ಏರಿಸುತ್ತಲೇ ಇದ್ದಾರೆ. ಪ್ರತಿ ತಿಂಗಳೂ ಬೆಲೆಯಲ್ಲಿ 25 ರಿಂದ 40 ದಾಮಾಶಾ ಏರಿಸುತ್ತಿದ್ದಾರೆ. ತಿಂಡಿ, ಊಟ, ಪಾನೀಯಗಳ ಗುಣಮಟ್ಟ ಕೂಡ ಚೆನ್ನಾಗಿರುವುದಿಲ್ಲ. ಹೀಗೆ ತಮ್ಮಿಷ್ಟದಂತೆ ಬೆಲೆಯನ್ನು ಏರಿಕೆ ಮಾಡುತ್ತಾ ಇರುವುದರಿಂದ ಹೋಟೆಲ್‌ನ್ನೇ ಆಶ್ರಯಿಸಿಕೊಂಡಿರುವ ಗ್ರಾಹಕರಿಗೆ ತೊಂದರೆ ಕೊಟ್ಟಂತಾಗುತ್ತದೆ. ಅದೂ ಅಲ್ಲದೆ ಹೋಟೆಲುಗಳಲ್ಲಿ ಶುಚಿತ್ವ ಚೆನ್ನಾಗಿರುವುದಿಲ್ಲ. ಆರೋಗ್ಯದೃಷ್ಟಿಯಿಂದ ರೋಗಗಳು ಉದ್ಭವವಾಗುವ ರೀತಿಯಲ್ಲಿ ಕೂಡ ಕೆಲವು ಹೋಟೆಲುಗಳು ಇರುವುದನ್ನು ಕಾಣಬಹುದು. ಆದಕಾರಣ ವಿಷಿ ಬಂದಂತೆ ದರಗಳನ್ನು ಹೆಚ್ಚು ಮಾಡುವುದಕ್ಕೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿರುತ್ತದೆ. ಆರೋಗ್ಯಕ್ಕೆ ಹಾನಿಯಾಗದಂತೆ ಶುಚಿತ್ವ ಕಾಪಾಡುವುದಕ್ಕೂ ವ್ಯವಸ್ಥೆ ಕ್ರಮಗಳನ್ನು ಅನುಷ್ಠಾನ ಮಾಡಬೇಕು. ಈ ಕುರಿತು ಮಾನ್ಯ ಆಹಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಎನ್. ನರಸಿಂಹ ಮೂರ್ತಿ (ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿ) :– ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಇದಿನಬ್ಬ ಅವರು ಪ್ರಸ್ತಾಪ ಮಾಡಿರುವ ವಿಚಾರ ಬಹುಶಃ ನೇರವಾಗಿ ನನ್ನ ಇಲಾಖೆಗೆ ಹೇಗೆ ಸಂಬಂಧಪಟ್ಟಿದೆ ಎಂದು ಅರ್ಥವಾಗದೆ ಕಷ್ಟದಿಂದ ಉತ್ತರಿಸಬೇಕಾಗಿದೆ. ಏಕೆಂದರೆ ಆಹಾರ ವಸ್ತುಗಳನ್ನು ವಿತರಣೆ ಮಾಡತಕ್ಕ ಜವಾಬ್ದಾರಿ ನನ್ನದಿದೆ. ಆದರೆ ಹೋಟೆಲುಗಳಿಗೆ ಏನು ಆಹಾರ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದೇವೆ. ಇದರ ಬಗ್ಗೆ ನೇರವಾದ ಕರ್ತವ್ಯ ನಮ್ಮದಲ್ಲದಿರುವುದರಿಂದ ಸರಿಯಾದ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ. ಸಾರ್ವಜನಿಕ ದೃಷ್ಟಿಯಿಂದ ನಾವು ಅರ್ಥ ಮಾಡಿಕೊಳ್ಳುವುದಾದರೆ ಆಹಾರ ವಸ್ತುಗಳ ಬೆಲೆಗಳು ಗಗನಕ್ಕೆ ಹೋಗುತ್ತಿದೆ. ಅದನ್ನು ತಗ್ಗಿಸಬೇಕು ಎಂಬುದು ರಾಷ್ಟ್ರೀಯ ನೀತಿ. ಆದರೆ ಹೋಟೆಲುಗಳಲ್ಲಿ ತಿಂಡಿ ವಗೈರೆ ಬೆಲೆ ಜಾಸ್ತಿಯಾಗುತ್ತಾ ಇರುವ ವಿಚಾರ ಎಲ್ಲರೂ ಗಮನಿಸಬೇಕಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ತಿಂಡಿ ಪಾನೀಯ ವಸ್ತುಗಳನ್ನು ದುಬಾರಿಯಾಗಿ ಮಾರುತ್ತಿರುವುದನ್ನು ತಡೆಗಟ್ಟುವುದು ರಾಷ್ಟ್ರೀಯ ನೀತಿಯಲ್ಲ ಎಂಬುದು ತಮಗೆ ಗೊತ್ತಿರುವ ವಿಚಾರ. ಹೋಟೆಲ್ ಮಾಲೀಕರುಗಳನ್ನು ಬೇಕಾದರೆ ಒಂದು ಸಾರಿ ಸೌಜನ್ಯ-ಯುತವಾಗಿ ನಾನು ಬರಮಾಡಿಕೊಂಡು ತಿಂಡಿ ಚೆನ್ನಾಗಿ ಮಾಡಬೇಕು ಮತ್ತು ತಿಂಡಿ ಬೆಲೆ ಕಡಿಮೆ ಮಾಡಬೇಕು.

ಎಂದು ನಿಮ್ಮೆಲ್ಲರ ಅನಿಸಿಕೆಗಳನ್ನು ಆರ್ಥ ಮಾಡಿಕೊಂಡು ಅವರಿಗೆ ಮನವಿ ಮಾಡುವುದಕ್ಕೆ ಅವಕಾಶವಿದೆಯೆ ಹೊರತು ಕಾನೂನಿನ ಚೌಕಟ್ಟಿನಲ್ಲಿ ಇಳಿಸಿ ಎಂಬುದಕ್ಕೆ ಅಧಿಕಾರ ಇಲ್ಲ ಎಂಬುದು ಹೇಳುತ್ತೇನೆ. ವಿಷಯ ಬಹಳ ಚೆನ್ನಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಹಿಂದೆ ಶ್ರೀರಾಮುಲು ಅವರು ಮಂತ್ರಿಯಾಗಿದ್ದಾಗ ಮಾಡಿದ್ದರು.

ಶ್ರೀ ಟಿ. ಎನ್. ನರಸಿಂಹ ಮೂರ್ತಿ :– ಮಾನ್ಯ ಅಧ್ಯಕ್ಷರೆ, ಕಾನೂನಿನ ಚೌಕಟ್ಟಿನಲ್ಲಿ ಅವರ ಮೇಲೆ ನೇರವಾಗಿ ಯಾವುದೇ ನಿಯಂತ್ರಣ ಇಲ್ಲ. ಈಗ ಏನು ಅವಲೋಕಿಸಿದ್ದೇನೆ ಇದನ್ನು ಜ್ಞಾಪಕದಲ್ಲಿಟ್ಟು-ಕೊಂಡು ಅತಿ ಜಾಗ್ರತೆಯಾಗಿ ಹೋಟೆಲ್ ಮಾಲೀಕರುಗಳನ್ನು ಕರೆಯಿಸಿಕೊಂಡು ಶಾಸಕರ ಅನಿಸಿಕೆ ಏನಿದೆ...

ಶ್ರೀ ವಾಟಾಳ್ ನಾಗರಾಜ್ :– ಮಾಲೀಕರುಗಳನ್ನು ಕರೆಯಿಸಿದರೆ ಆಗುವುದಿಲ್ಲ. ಭಯ ಪುಟ್ಟಸಬೇಕು ಅವರಿಗೆ. ಒಂದೊಂದು ಊಟ 25 ರೂಪಾಯಿನಿಂದ 50 ರೂಪಾಯಿಗೆ ಹೋಗಿದೆ.

ಅಧ್ಯಕ್ಷರು :– ಶ್ರೀ ಶಿವಾನಂದ ಕೌಜಲಗಿ.

ಶ್ರೀ ಟಿ. ಎನ್. ನರಸಿಂಹ ಮೂರ್ತಿ :– ಸಾರ್, ಒಂದು ಮಾತು ಹೇಳುತ್ತೇನೆ.

Mr. Speaker :– You don't have to reply.

ಶ್ರೀ ಟಿ. ಎನ್. ನರಸಿಂಹ ಮೂರ್ತಿ :– ಸಾರ್, ಇಲ್ಲಿ ರೆಕಾರ್ಡ್‌ಗೆ ಹೋಗುತ್ತಿದೆ.

Mr. Speaker :– It is not going into the record.

ಶ್ರೀ ಟಿ. ಎನ್. ನರಸಿಂಹ ಮೂರ್ತಿ :– ರೆಕಾರ್ಡ್‌ಗೆ ಹೋಗದಿದ್ದರೆ ಬಿಡಿ.

7) ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಬೈಲಹೊಂಗಲ ತಾ॥ ರೈತರಿಗೆ ಲಿಫ್ಟ್-ಇರಿಗೇಶನ್ ಯೋಜನೆ.

† ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ (ಬೈಲಹೊಂಗಲ) :– ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಪಕ್ಕುಂದ, ದೇವಲಾಪುರ, ಸಂಗೊಳ್ಳಿ ಗ್ರಾಮಗಳು ಮತ್ತು ಸವದತ್ತಿ ತಾಲ್ಲೂಕು ಪೈಕಿ ಮಾಟೊಳ್ಳಿ ಮತ್ತು ಪೂಣಿ ಗ್ರಾಮಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಗಿರುತ್ತವೆ. ಈ ಮುಳುಗಡೆಯಾದ ಪ್ರದೇಶದ ಜನರಿಗೆ ನೀರಿನ ಸೌಕರ್ಯವನ್ನು ಒದಗಿಸುವ ಸಲುವಾಗಿ ಆಗಿನ ಮುಖ್ಯಮಂತಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲ್ ಹಾಗೂ ಆಗಿನ ಕಂದಾಯ ಸಚಿವರಾಗಿದ್ದ ಶ್ರೀ ಎಚ್. ವಿ. ಕೌಜಲಗಿ ಇವರು ಶ್ರೀ ಎಸ್. ಜಿ. ಬಾಳೇಕುಂದರಗಿ, ಮುಖ್ಯ ಇಂಜಿನಿಯರ್, ಇವರ ಸಲಹೆ ಮೇರೆಗೆ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಏತನೀರಾವರಿ ಯೋಜನೆ ಮಾಡಲಾಗಿತ್ತು. ಆದರೆ ಈ ಏತ ನೀರಾವರಿ ಯೋಜನೆಯಿಂದ ಬರುವ ಜಮೀನುಗಳಿಗೆ ನೀರು ಸರಿಯಾಗಿ ಬರುತ್ತಿರುವುದಿಲ್ಲ. ಏಕೆಂದರೆ ಇವು ಲಿಫ್ಟ್‌ನಿಂದ 13 ರಿಂದ 20 ಮೀಟರ್ ಅಂತರದ ಮೇಲೆ ಇರುತ್ತವೆ. ಹೀಗಾಗಿ ಇಂಜನಿಯರ್ ಇಲ್ಲಿ ಹೊಸ ಲಿಫ್ಟ್ ಸ್ಕೀಮನ್ನು ಮಾಡಬೇಕಾಗುವುದೆಂದು ಅಭಿಪ್ರಾಯ ಪಟ್ಟಿರಿರುವುದರಿಂದ ಹಾಗೂ ಶ್ರೀ ಎಸ್. ಜಿ. ಬಾಳೇಕುಂದರಗಿ ಮುಖ್ಯ ಇಂಜನಿಯರ್ ಇವರ ಅಭಿಪ್ರಾಯದ ಮೇರೆಗೆ ಹೊಸ ಲಿಫ್ಟ್ ಇರಿಗೇಷನ್ ಸ್ಕೀಂ ತೆಗೆದುಕೊಳ್ಳಲು ಶ್ರೀ ಎಚ್. ಡಿ. ದೇವೇಗೌಡ, ಮಾಜಿ ಲೋಕೋಪಯೋಗಿ ಸಚಿವರು, ಶ್ರೀ ಜಿ. ಪುಟ್ಟಸ್ವಾಮಿ ಗೌಡ, ಹಿಂದಿನ ಲೋಕೋಪಯೋಗಿ ಸಚಿವರು, ಶ್ರೀ ವೀರೇಂದ್ರ ಪಾಟೀಲ್, ಹಿಂದಿನ ಮುಖ್ಯ ಮಂತ್ರಿಗಳು ಹಾಗೂ ಇಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ಬಂಗಾರಪ್ಪನವರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಬೈಲಹೊಂಗಲ ತಾಲ್ಲೂಕು ಪೈಕಿ ಸಂಗೊಳ್ಳಿ ಹತ್ತಿರ ದೇವಲಾಪುರ ಮತ್ತು ಪಕ್ಕುಂದ ಗ್ರಾಮದ ಹತ್ತಿರ ಹಾಗೂ ಸವದತ್ತಿ ತಾಲ್ಲೂಕು ಪೈಕಿ ಮಾಟೊಳ್ಳಿ ಹಾಗೂ ಪೂಣಿಗ ಗ್ರಾಮದ ಹತ್ತಿರ ಹೊಸ ಲಿಫ್ಟ್ ಇರಿಗೇಷನ್ ಸರ್ವೆ ಮಾಡಿ ಪ್ಲಾನ್ ಎಸ್ಟಿಮೇಟ್ ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ನಿರ್ದೇಶಕರು, ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್, ಬಿಜಾಪುರ, ಇವರಿಗೆ ಆದೇಶ ನೀಡಿರುವರು. ಆದಕಾರಣ ಈ ಜಮೀನುಗಳು ಈಗಾಗಲೇ ಮಲಪ್ರಭಾ ಯೋಜನೆಯ ಕಮ್ಯಾಂಡ್ ಏರಿಯಾದಲ್ಲಿ ಬರುತ್ತಿರುವುದರಿಂದ ಇಂಜಿನಿಯರ್ ಅವರ ಸಲಹೆಯಂತೆ ಪ್ಲಾನ್ ಎಸ್ಟಿಮೇಟ್‌ನ್ನು ಕೂಡಲೇ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್, ಬಿಜಾಪುರ ಇವರಿಂದ ತರಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ವಿನಂತಿಸಿ ಕೊಳ್ಳುತ್ತೇನೆ.

4.10 ಪಿ.ಎಂ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :– ಮಾನ್ಯ ಅಧ್ಯಕ್ಷರೆ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತ ಬಿಜಾಪುರ ಇವರು